# ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN: U85110KA1970SGC001919

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001

ವೆಬ್‌ಸೈಟ್: https://kpcl.karnataka.gov.in

ಸಂಖ್ಯೆ: ಎಪಿಸಿ(ಹೆಚ್‌ಎಲ್‌ಎಸ್)/

ದಿನಾಂಕ:08.08.2023

## ಅಧಿಸೂಚನೆ

### ಗುತ್ತಿಗೆ ಆಧಾರದ ಮೇಲೆ ನೇಮಕಾತಿ

1970ನೇ ಇಸ್ವಿಯಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿದ್ದು ವಿದ್ಯುತ ಉತ್ಪಾದನೆಯಲ್ಲಿ ತೊಡಗಿದ್ದು ನಿಗಮದ ಕಾನೂನು ವ್ಯವಹಾರಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿನ ಕಾನೂನು ವಿಷಯಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸಲಹೆ ನೀಡಲು, ನ್ಯಾಯಾಲಯಗಳಲ್ಲಿ ನಿಗಮದ ಪರವಾಗಿ ವ್ಯವಹರಿಸುವ ನಿಗಮದ ವಕೀಲರೊಂದಿಗೆ ಸಂಪರ್ಕಿಸಲು ಮತ್ತು ಇತರೆ ಕಾನೂನು ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ **ಮುಖ್ಯಸ್ಥರು(ಕಾನೂನು ಸೇವೆಗಳು)** ಹುದ್ದೆಗೆ ಈ ಕೆಳಕಂಡ ಅರ್ಹತೆಯಂತೆ ನೇಮಿಸಲು ನಿಗಮವು ಉದ್ದೇಶಿಸಿದೆ.

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿದ ಅರ್ಹತೆ |
|---|---|---|---|
| 1 | ಮುಖ್ಯಸ್ಥರು(ಕಾನೂನು ಸೇವೆಗಳು) | 01 | ನಿವೃತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು |

1) **ಅರ್ಜಿ ಸಲ್ಲಿಸುವ ವಿಧಾನ:**

ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ **https://kpcl.karnataka.gov.in** ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ವಿದ್ಯಾರ್ಹತೆ/ಅನುಭವಗೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿ **kpclcontractappt@gmail.com** ಇ-ಮೇಲ್‌ಗೆ ದಿನಾಂಕ **07.09.2023 ಸಂಜೆ 5:30 ಗಂಟೆ** ರೊಳಗಾಗಿ ಸಲ್ಲಿಸತಕ್ಕದ್ದು. ನಿಗದಿತ ಸಮಯ/ದಿನಾಂಕದ ನಂತರ ಸ್ವೀಕೃಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಇತರೆ ಯಾವುದೇ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

2) **ವಯೋಮಿತಿ: 60 ರಿಂದ 70 ವರ್ಷಗಳು.**

3) **ವೇತನ ಹಾಗೂ ಇತರೆ ಸೌಲಭ್ಯಗಳು:**

i) ಸದರಿ ಹುದ್ದೆಗೆ ಮಾಹೆಯಾನ ಸಂಭಾವನೆ ರೂ.**60,500/- (ಪ್ರಸ್ತುತ ಪಡಿಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಸಲಾಗುವ ಸಂಭಾವನೆ ಸೇರಿ ಅವರ ನಿವೃತ್ತ ಸಮಯದಲ್ಲಿ ಪಡೆಯುತ್ತಿದ್ದ ವೇತನವನ್ನು ಮೀರುವಂತಿಲ್ಲ)** subject to deduction of Income Tax as per rules.

ii) ರೂ.1000/- ಆತಿಥ್ಯ ಭತ್ಯೆ, ವಾಹನ ಸೌಕರ್ಯ ಹಾಗೂ ಸ್ಥಿರ ದೂರವಾಣಿ, ಎರಡು ದೈನಂದಿನ ಪತ್ರಿಕೆಗಳು ಹಾಗೂ ಎರಡು ನಿಯತಕಾಲಿಕ ಪತ್ರಿಕೆಗಳನ್ನು ಒದಗಿಸಲಾಗುವುದು.

iii) ಕಾರ್ಯ ಸ್ಥಳವು ಬೆಂಗಳೂರು ಆಗಿರುತ್ತದೆ. ಕಛೇರಿ ಕೆಲಸದ ನಿಮಿತ್ತ ಅವಶ್ಯಕವಾಗಿ ಪ್ರಯಾಣ ಮಾಡಬೇಕಾಗಿ ಬಂದಲ್ಲಿ, ನಿಗಮದಲ್ಲಿ ಪ್ರಧಾನ ಪ್ರಬಂಧಕರವರಿಗೆ ಲಭ್ಯವಿರುವ ಪ್ರಯಾಣ/ದಿನ ಭತ್ಯೆಗೆ ಅರ್ಹರಿರುತ್ತಾರೆ.

iv) ತಿಂಗಳಿಗೆ ಒಂದು ಸಾಂದರ್ಭಿಕ ರಜೆ ನೀಡಲಾಗುವುದು.

4) **ಆಯ್ಕೆ ವಿಧಾನ :**

ಸಂದರ್ಶನ ಮುಖಾಂತರ ಆಯ್ಕೆ ಮಾಡಲಾಗುವುದು.

5) **ಸಲ್ಲಿಸಬೇಕಾದ ದಾಖಲೆಗಳು :**

ಈ ಕೆಳಕಂಡ ದಾಖಲೆಗಳನ್ನು ದೃಢೀಕರಿಸಿ (Self Attested) ಹಾಜರುಪಡಿಸುವುದು;

i) ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

ii) ಸೇವೆಯಿಂದ ಬಿಡುಗಡೆಹೊಂದಿರುವ ಬಗ್ಗೆ ದಾಖಲೆ.

iii) ನಿವೃತ ಸಮಯದಲ್ಲಿ ಪಡೆದ ವೇತನ ಪಟ್ಟಿ (Last pay drawn salary slip) ಹಾಗೂ ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಪಟ್ಟಿ (pension slip).

iv) ಒಂದು ಇತ್ತೀಚಿನ ಭಾವಚಿತ್ರ.

6) **ಸಂದರ್ಶನಕ್ಕೆ ಹಾಜರಾಗಬೇಕಾದ ಸಂದರ್ಭದಲ್ಲಿ ನಿಗಮದಿಂದ ಯಾವುದೇ ಪ್ರಯಾಣ/ದಿನಭತ್ಯೆ (TA/DA) ನೀಡಲಾಗುವುದಿಲ್ಲ.**

7) **ಸಾಮಾನ್ಯ ಸೂಚನೆಗಳು:**

ಅ. ಈ ಗುತ್ತಿಗೆ ಆದಾರದ ನೇಮಕಾತಿಯು ನಿಗಮದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ರೂ.200/– ಮೌಲ್ಯದ ಎಂಬೋಸ್ ಮಾಡಿದ ಛಾಪ ಕಾಗದದಲ್ಲಿ ನಿಗಮದೊಂದಿಗೆ ಸೇವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

ಆ. ಗುತ್ತಿಗೆ ಆದಾರದ ಮೇಲೆ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ.

ಇ. ಅಭ್ಯರ್ಥಿಗಳು ಗುತ್ತಿಗೆ ಅವಧಿಯ ಮಧ್ಯದಲ್ಲಿ ಸೇವೆಯಿಂದ ರಾಜೀನಾಮೆ ಕೊಡಲು ಇಚ್ಚಿಸಿದಲ್ಲಿ ಒಂದು ತಿಂಗಳ ಮೊದಲು ನೋಟಿಸ್ ನೀಡತಕ್ಕದ್ದು.

ಈ. ನಿಗಮವು ಈ ಗುತ್ತಿಗೆ ಆದಾರದ ನೇಮಕಾತಿಯನ್ನು ಭಾಗಶಃ/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಆಧಿಕಾರವನ್ನು ಹೊಂದಿದೆ.

ನಿರ್ದೇಶಕರು(ಮಾ.ಸಂ.)